ದಿನಾಂಕಃ 17-12-2020

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್.ಎಸ್. ವಕೀಲರಿಂದಃ-

ಪ್ರತಿವಾದಿಗಳು ಸ್ವತ್ತನ್ನು ಕ್ರಯಕ್ಕೆ ಪಡೆಯುವ ಮೊದಲು ಅದು ಪುಟ್ಟಣ್ಣರವರ ಸ್ವತ್ತಾಗಿತ್ತು ಪುಟ್ಟಣ್ಣರವರು ಯಾವ ಸ್ವತ್ತಿನ ಚೌತರ್ಪಿನಲ್ಲಿ ಸ್ವಾಧೀನದಲ್ಲಿದ್ದರೋ ಅದೇ ಸ್ವತ್ತನ್ನು ಪ್ರತಿವಾದಿಯವರಿಗೆ ಕ್ರಯಕ್ಕೆ ಕೊಟ್ಟಿದ್ದಾರೆ ಎಂದರೆ ನಿಜ. ನಾವುಗಳು ಸ್ವಾಧೀನದಲ್ಲಿದ್ದ ಸ್ವತ್ತುಗಳನ್ನು ನಮಗೆ ದಾನಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದರೆ ನಿಜ ಆದರೆ ವಿಸ್ತೀರ್ಣ ಮಾತ್ರ ಪತ್ರಗಳಲ್ಲಿ ಬದಲಾವಣೆಯಾಗಿದೆ ಎಂದು ನಾನು ಹೇಳುತ್ತೇನೆ. ದಾನಪತ್ರಗಳನ್ನು ಬರೆದುಕೊಡುವ ಮುಂಚೆ ಒಟ್ಟಾರೆ ಸ್ವತ್ತನ್ನು ಅಳತೆ ಮಾಡಿಸಿ ಪ್ರತ್ಯೇಕವಾಗಿ ಸ್ವತ್ತುಗಳನ್ನು ನಿಗದಿಪಡಿಸಿ ಪತ್ರಗಳನ್ನು ಬರೆದುಕೊಟ್ಟಿರುವುದಿಲ್ಲ. ಪ್ರತಿವಾದಿಯವರ ಹೆಸರಿಗೆ ಕ್ರಯವಾಗಿರುವ ಸ್ವತ್ತಿನ ವಿಸ್ತೀರ್ಣ ಮತ್ತು ಚೌತರ್ಪು ಸರಿಯಾಗಿಯೇ ಇದೆ ಎಂದರೆ ಸರಿಯಲ್ಲ. ಸರ್ವೆ ನಂ.128 ರಲ್ಲಿ ಒಟ್ಟು 5 ಎಕರೆ 8 ಗುಂಟೆ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ. ಆ ಸ್ವತ್ತಿನ ಪೈಕಿ 3 ಎಕರೆ 28 ಗುಂಟೆ ಸ್ವತ್ತಿಗೆ ಹಾಕಿರುವ ಬೌಂಡರಿ ಸರಿಯಾಗಿದೆ ಎಂದರೆ ಸರಿಯಲ್ಲ.

ಪ್ರತಿವಾದಿಯವರ ಹೆಸರಿಗೆ ಕ್ರಯವಾಗುವ ಸಮಯದಲ್ಲಿ ಸರ್ವೆ ನಂ128 ಬರೆಯುವ ಬದಲಾಗಿ ಸಂಖ್ಯೆಯನ್ನು 126 ಎಂದು ತಪ್ಪಾಗಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂ.126, 127 ಮತ್ತು 128 ರಲ್ಲಿಯ ಸ್ವತ್ತುಗಳು ಮೂಲತಃ ನನ್ನ ಅಜ್ಜಿಗೆ ಸೇರಿದ್ದವು ಎಂದರೆ ನಿಜ. ನನ್ನ ಅಜ್ಜಿಯ ಹೆಸರಿನಿಂದ ಇದ್ದಾಗ ಆ ಎಲ್ಲಾ ಸರ್ವೆ ನಂಬರುಗಳಲ್ಲಿ ಎಷ್ಟೆಷ್ಟು ವಿಸ್ತೀರ್ಣದ ಸ್ವತ್ತು ಇತ್ತು ಎಂದು ಗೊತ್ತು. ಸರ್ವೆ ನಂ.126 ರಲ್ಲಿ 5 ಎಕರೆ 8 ಗುಂಟೆ, ಸರ್ವೆ ನಂ.127 ರಲ್ಲಿ 3 ಎಕರೆ 31 ಗುಂಟೆ, ಸರ್ವೆ ನಂ.128 ರಲ್ಲಿ 4 ಎಕರೆ 21 ಗುಂಟೆ ಸ್ವತ್ತು ಇರುತ್ತವೆ. ಎಲ್ಲಾ ಸರ್ವೆ ನಂಬರುಗಳ ಪಹಣಿ ಪತ್ರಿಕೆಯಲ್ಲಿ ನಮೂದಿಸಿರುವ ವಿಸ್ತೀರ್ಣ ಮತ್ತು ನಂಬರು ಮೂಲ ಸರ್ವೆ ದಾಖಲೆಗಳಲ್ಲಿ ಇರುವ ವಿಸ್ತೀರ್ಣ ವ್ಯತ್ಯಾಸದಿಂದ ಕೂಡಿವೆ ಎಂದರೆ ನಿಜ. ಪಹಣಿ ಪತ್ರಿಕೆಗಳಲ್ಲಿ ನಮೂದಿರುವ ವಿಸ್ತೀರ್ಣಗಳ ಆಧಾರದ ಮೇಲೆ ಮಾತ್ರ ದಾನ ಪತ್ರ ಕ್ರಯಪತ್ರದ ವ್ಯವಹಾರಗಳು ಆಗಿರುತ್ತವೆ ಎಂದರೆ ನಿಜ. ಸರ್ವೆ ನಂ.128 ರಲ್ಲಿ ಪ್ರತಿವಾದಿಗಳಿಗೆ ಕ್ರಯಪತ್ರ ಆಗುವ ಸಮಯದಲ್ಲಿ 4 ಎಕರೆ 21 ಗುಂಟೆ ವಿಸ್ತೀರ್ಣವನ್ನು ನಮೂದಿಸಿದ್ದರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಸ್ವತ್ತಿನ ಸರ್ವೆ ನಂಬರ್ ಬದಲಾಗಿದೆಯಲ್ಲಾ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯವರ ಮಾರಾಟಗಾರರು ತಮಗಿದ್ದ ಸ್ವತ್ತಿಗಿಂತ ಹೆಚ್ಚಿಗೆ ಸ್ವತ್ತನ್ನು ಸೇರಿಸಿ ಕ್ರಯಪತ್ರ ಬರೆದುಕೊಟ್ಟಿರುವುದರಿಂದ ಪ್ರತಿವಾದಿಯವರು ನನ್ನ ಸ್ವತ್ತಿನಲ್ಲಿ ಅತಿಕ್ರಮಣ ಮಾಡುತ್ತಿದ್ದಾರೆ ಎಂದು ನಾನು ಹೇಳುತ್ತೇನೆ.

ನಮಗೆ ದಾನವಾಗಿ ಬಂದಿರುವ ಸ್ವತ್ತಿನ ಸರ್ವೆ ನಂ.127 ಇದ್ದು, ವಿಸ್ತೀರ್ಣ 3 ಎಕರೆ 31 ಗುಂಟೆ ಇರುತ್ತದೆ. ನಮ್ಮ ಹೆಸರಿಗೆ ಆ ರೀತಿಯಾಗಿ ದಾನಪತ್ರವಾದ ನಂತರ ನಾವೇನೂ ಅಳತೆ ಮಾಡಿಸಿ ನೋಡಿಲ್ಲ. ಪತ್ರ ಬರೆಯುವ ಸಮಯದಲ್ಲಿ ಇದ್ದ ವಿಸ್ತೀರ್ಣ ಮತ್ತು ಚೌತರ್ಪನ್ನು ನಮೂದಿಸಿ ನನ್ನ ಹೆಸರಿಗೆ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನಿಜ. ನನ್ನ ಹೆಸರಿಗೆ ದಾವಾಸ್ವತ್ತಿನ ಖಾತೆ ಬದಲಾವಣೆ ಮಾಡಿಕೊಳ್ಳುವ ಸಮಯದಲ್ಲಿ ನಾನೇನೂ ಹದ್ದುಬಸ್ತು ಮಾಡಿಕೊಂಡಿರುವುದಿಲ್ಲ. ನನ್ನ ಹೆಸರಿಗೆ ದಾನಪತ್ರ ಆಗುವ ಮುಂಚೆಯೂ ಕೂಡ ನಮ್ಮೆಲ್ಲಾ ಅಣ್ಣ-ತಮ್ಮಂದರಿಗೆ ಎಷ್ಟು ಸ್ವತ್ತು ಇತ್ತೊ ಅದೇ ಸ್ವತ್ತಲ್ಲಿ ಅನುಭವದಲ್ಲಿದ್ದರು ಎಂದರೆ ನಿಜ. ದಾನಪತ್ರದಂತೆ ನಮ್ಮೆಲ್ಲಾ ಅಣ್ಣ-ತಮ್ಮಂದರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ನಿಜ. ಆ ರೀತಿಯಾಗಿ ದಾನಪತ್ರವಾದ ನಂತರ ನಾವೆಲ್ಲಾ ಸಹೋದರರು ನಮ್ಮ ನಮ್ಮ ಸ್ವತ್ತುಗಳಲ್ಲಿ ಮತ್ತು ನಮ್ಮ ನಮ್ಮ ಚೌತರ್ಪುಗಳಲ್ಲಿ ಇರುತ್ತೇವೆ ಎಂದರೆ

ಸಾಕ್ಷಿದಾರರು ನಾನು ಮಾತ್ರ ನನ್ನ ಸ್ವತ್ತಿನಲ್ಲಿ ಇದ್ದು ಇನ್ನುಳಿದವರು ಬೇರೆ ಬೇರೆ ಸ್ವತ್ತುಗಳ ಸ್ವಾಧೀನದಲ್ಲಿದ್ದಾರೆ ಎನ್ನುತ್ತಾರೆ.

**5** ಎಕರೆ **8** ಗುಂಟೆ ಸ್ವತ್ತಿನಲ್ಲಿ **1** ಎಕರೆ **28** ಗುಂಟೆ ಸ್ವತ್ತನ್ನು ನಾಗಮ್ಮ ಎನ್ನುವವರಿಗೆ ಮಾರಾಟ ಮಾಡಿ ಅದಾದ ನಂತರ **3** ಎಕರೆ **20** ಗುಂಟೆ ಸ್ವತ್ತನ್ನು **2** ನೇ ಪ್ರತಿವಾದಿಯವರ ತಂದೆ ಸುಬ್ಬೇಗೌಡ ಇವರಿಗೆ ದಿನಾಂಕ **30.06.2003** ರಂದು ಕ್ರಯ ಪತ್ರ ಬರೆದುಕೊಟ್ಟಿದ್ದರು ಎಂದರೆ ನಿಜ. ಆ ರೀತಿಯಾಗಿ ತನ್ನ ಭಾಗಕ್ಕೆ ಬಂದ ಸ್ವತ್ತನ್ನು ಇಬ್ಬರಿಗೆ ಕ್ರಯ ಬರೆದುಕೊಟ್ಟಿರುವುದು ನಿಜ. ಆ ರೀತಿಯಾಗಿ ಕ್ರಯಪತ್ರ ಬರೆದುಕೊಡುವ ಸಮಯದಲ್ಲಿ ಸರ್ವೆ ನಂ.**128** ರ ಬದಲಾಗಿ **126** ಎಂದು ಆರ್.ಟಿ.ಸಿ. ಪ್ರಕಾರ ಬರೆದುಕೊಟ್ಟರು ಎಂದರೆ ನಿಜ. ಸರ್ವೆ ನಂಬರು ತಪ್ಪಾಗಿದ್ದನ್ನು ಹೊರತುಪಡಿಸಿದರೆ ಉಳಿದ ವಿಸ್ತೀರ್ಣ ಮತ್ತು ಚೌತಪ್ರು ಸರಿಯಾಗಿದೆ ಎಂದರೆ ಸುಳ್ಳು. ವಿಸ್ತೀರ್ಣ ತಪ್ಪಾಗಿದೆ ಎಂದು ನಾನು ಹೇಳುತ್ತೇನೆ. ಸರ್ವೆ ನಂ.**126** ಮತ್ತು **128** ರ ಮಧ್ಯ ಸರ್ವೆ ನಂ.**127** ರ ಜಮೀನು ಇರುತ್ತದೆ ಎಂದರೆ ನಿಜ. ಸರ್ವೆ ನಂ. **126** ರ ಜಮೀನು ಹೊಳೆಯ ಕಡೆ ಅಂದರೆ ಪಶ್ಚಿಮ ಕಡೆ ಇರುತ್ತದೆ ಎಂದರೆ ನಿಜ. ಸರ್ವೆನಂ **126** ರ ಪಕ್ಕಕೆ **127** ಮತ್ತು ಅದರ ಪಕ್ಕಕೆ **128** ರ ಜಮೀನು ಇರುತ್ತದೆ ಎಂದರೆ ನಿಜ. ಮೊದಲಿನಿಂದಲೂ ನಮೆಲ್ಲ ಅಣ್ಣತಮ್ಮಂದಿರಗೆ ಸ್ವತ್ತುಗಳ ವಿಸ್ತೀರ್ಣ ಮತ್ತು ಚೌತರ್ಪಿನ ಬಗ್ಗೆ ನಿಖರವಾದ ಮಾಹಿತಿ ಇರಲಿಲ್ಲ ಎಂದರೆ ನನಗೆ ನಿಖರವಾದ ಮಾಹಿತಿ ಇತ್ತು ಆದರೆ ಉಳಿದವರಿಗೆ ಮಾಹಿತಿ ಇತ್ತೊ ಇಲ್ಲವೋ ಗೊತ್ತಿಲ್ಲ. ಸರ್ವೆ ನಂ **126** ರಿಂದ **128** ರ ಲ್ಲಿ ನಮ್ಮೆಲ್ಲ ಅಣ್ಣ ತಮ್ಮಂದಿರಲ್ಲಿ ಎಂದಿಗೂ ತಕರಾರು ಇರಲಿಲ್ಲ ಎಂದರೆ ನಿಜ.

ಪ್ರತಿವಾದಿಯವರಿಗೆ ಸ್ವತ್ತನ್ನು ಕ್ರಯಕ್ಕೆ ಕೊಟ್ಟ ಪುಟ್ಟಣ್ಣ ಇವರು ಸ್ವಾಧೀನದಲ್ಲಿದ್ದ ಸ್ವತ್ತಿನ ಬಗ್ಗೆ ನನಗೆ ಯಾವುದೇ ತಕರಾರು ಇರಲಿಲ್ಲ. ಸುಬ್ಬೇಗೌಡರು ಕ್ರಯಕ್ಕೆ ಕೊಟ್ಟ ಸ್ವತ್ತಿನಲ್ಲಿ ಕೂಡ ಕ್ರಯಕ್ಕೆ ಪಡೆದವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ನಿಜ. ಕ್ರಯ ಪತ್ರದಂತೆ ನಾಗಮ್ಮ **1** ಎಕರೆ **28** ಗುಂಟೆ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನಿಜ. ಮುರುಳಿಧರ ಇವರು ಕೂಡ **1** ಎಕರೆ **28** ಗುಂಟೆ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನಿಜ. ನಾಗಮ್ಮ ಮತ್ತು **1** ನೇ ಪ್ರತಿವಾದಿಯವರ ಗಂಡ ಸುಬ್ಬೇಗೌಡ ಇವರುಗಳಿಗೆ ಯಾವ ಸ್ವತತ್ತನ್ನು ಕ್ರಯಕ್ಕೆ ಕೊಟ್ಟಿರುತ್ತಾರೋ ಅದೇ ಸ್ವತ್ತುಗಳ ಸ್ವಾಧೀನದಲ್ಲಿ ಅವರ ಮುಂದುವರೆದಿದ್ದಾರೆ ಎಂದರೆ ನಿಜ. ಪ್ರತಿವಾದಿಯವರು ತಾವು ಕ್ರಯಕ್ಕೆ ಪಡೆದಿರುವ ಸ್ವತ್ತಲ್ಲದೆ ಬೇರೆ ಯಾವುದೇ ಸ್ವತ್ತಿನಲ್ಲಿ ಅತಿಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ

ಈ ದಾವೆ ದಾಖಲಿಸುವ ಮುಂಚೆ ಜಮೀನು ಅಳತೆ ಮಾಡಿಕೊಡುವಂತೆ ನಾನು ಭೂಮಾಪನ ಇಲಾಖೆಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ನಿಜ. ಆ ಸಮಯದಲ್ಲಿ ಸರ್ವೆ ನಂ. **127** ಸ್ವತ್ತನ್ನು ಮಾತ್ರ ಅಳತೆ ಮಾಡಿ **126** ಮತ್ತು **128** ರ ಸ್ವತ್ತನ್ನು ಅಳತೆ ಮಾಡಿಲಿಲ್ಲ ಎಂದರೆ ನಿಜ. ಅದೇ ಅಳತೆ ಸಮಯದಲ್ಲಿ ಸರ್ವೆ ನಂ **126** ರ ಸ್ವತ್ತನ್ನು ಅಳತೆ ಮಾಡಿದ್ದರೆ ಯಾರು ಎಷ್ಟು ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಮತ್ತು ಯಾರು ಅತಿಕ್ರಮಣ ಮಾಡಿರುತ್ತಾರೆ ಎನ್ನುವ ವಿಚಾರ ತಿಳಿದುಬರುತಿತ್ತು ಎಂದರೆ ಸರಿಯಲ್ಲ. ಆ ರೀತಿಯಾಗಿ ಅಳತೆ ಮಾಡಿದಾಗ **127** ರ ಸ್ವತ್ತಿನ ಸ್ವಾಧೀನದಾರ ಬೇರೆ ಯಾವುದೇ ಸ್ವತ್ತಿನಲ್ಲಿ ಅತಿಕ್ರಮಣ ಮಾಡಿಲ್ಲ ಎಂದು ಕಂಡುಬಂತು. ಎಲ್ಲಾ ಸರ್ವೆ ನಂಬರ್ಗಳನ್ನು ಅಳತೆ ಮಾಡಿಸಿದರೆ ನಿಜಾಂಶ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ನಾವು ನಮಗೆ ಬೇಕಾದ ಒಂದು ಸ್ವತ್ತನ್ನು ಅಳತೆ ಮಾಡಿಸಿದ್ದೇವೆ ಎಂದರೆ ನಿಜ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೇಳಿರುತ್ತಾರೆ ಸಮಯವಕಾಶ ನೀಡಿರುತ್ತದೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ
.ನರಸೀಪುರ.